ಇ) ೧೯೮೭-೮೮ನೇ ಸಾಲಿನಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಅವಲಂಭಿಸಿ ಇದನ್ನು ಪರಿಶೀಲಿಸಲಾಗುವುದು.

ಎ.ಎನ್.ಎಂ. ಸಬ್‌ಸೆಂಟರನ್ನು ಪ್ರಾಥಮಿಕ ಆರೋಗ್ಯ ಘಟಕವನ್ನಾಗಿ ಮಾಡುವ ಬಗ್ಗೆ

೧೬೧ (ತಿಳಿಸಿ) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಸಂಡೂರು ತಾಲೂಕು ಉಬ್ಬಲಗುಂಡಿ ಗ್ರಾಮದಲ್ಲಿ ಎ.ಎನ್.ಎಂ. ಉಪಕೇಂದ್ರವು ದೊಡ್ಡ ಘಟಕವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಉಬ್ಬಲಗುಂಡಿ ಗ್ರಾಮದ ಸುತ್ತ ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳು ಇಲ್ಲದಿದ್ದು ಸಾರ್ವಜನಿಕರಿಗೆ ತೊಂದರೆಯಾಗಿರುವುದು ಅಲ್ಲವೆ ?

ಇ) ಸಾರ್ವಜನಿಕ ಹಿತದೃಷ್ಟಿಯಿಂದ ಉಬ್ಬಲಗುಂಡಿ ಎ. ಎನ್. ಎಂ. ಸಬ್ ಸೆಂಟರನ್ನು ಪ್ರಾಥಮಿಕ ಆರೋಗ್ಯ ಘಟಕವನ್ನಾಗಿ ಏರ್ಪಡಿಸುವ ಯೋಜನೆಯೇನಾದರೂ ಇದೆಯೇ ?

ಈ) ಹಾಗಿದ್ದಲ್ಲಿ ಯಾವಾಗಿನಿಂದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಉಬ್ಬಲಗುಂಡಿ ಗ್ರಾಮದಲ್ಲಿ ಎ.ಎನ್.ಎಂ. ಉಪಕೇಂದ್ರವು ಇಲ್ಲ.

ಆ) ಹೌದು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಅನುಷ್ಠಾನಕ್ಕೆ ತರುವ ಬಗ್ಗೆ

೧೬೨ (ತಿಳಿಸಿ) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೊಳಿಸುವ ಸಲುವಾಗಿ ಕಾವಲು ಸಮಿತಿಯೊಂದನ್ನು ರಚಿಸಲಾಗಿದೆಯೇ, ಅದರ ಕಾರ್ಯಕ್ರಮಗಳೇನು ? ಸದರಿ ಸಮಿತಿಯಲ್ಲಿ ಒಟ್ಟು ಸದಸ್ಯರ ಸಂಖ್ಯೆ ಎಷ್ಟು ?

ಆ) ೧೯೮೮ನೇ ವರ್ಷ ಆಡಳಿತದಲ್ಲಿ ಕನ್ನಡ ಅನುಷ್ಠಾನಕ್ಕೆ ತರಲಾಗುವುದೆಂದು ಸಾರಿದ್ದು ಫಲಕಾರಿ ಆಗಿದೆಯೇ ?

ಇ) ಆಡಳಿತದಲ್ಲಿ ಸಂಪೂರ್ಣ ಕನ್ನಡ ಬಳಕೆಯಾಗಲು ಇನ್ನೆಷ್ಟು ಕಾಲ ಬೇಕು ? ಹಾಗೂ ಇರುವ ತೊಂದರೆ ಏನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು) —

ಅ) ಹೌದು. ಅನುಬಂಧದಲ್ಲಿ ವಿವರಿಸಿದೆ. ೧೪ ಜನ ಸದಸ್ಯರು.

ಆ) ಬಹುಮಟ್ಟಿಗೆ ಆಗಿದೆ.

ಇ) ಕೇಂದ್ರ ಸರ್ಕಾರ, ಇತರ ರಾಜ್ಯ, ಹೈಕೋರ್ಟ್ ಕಚೇರಿ ಮತ್ತು ಮಹಾಲೇಖಪಾಲರ ಕಚೇರಿಗಳೊಂದಿಗೆ ಪತ್ರ ವ್ಯವಹಾರದಲ್ಲಿ ಕಾನೂನು ರೀತ್ಯ ಆಂಗ್ಲ ಭಾಷೆಯನ್ನು ಬಳಸಬೇಕು. ಉಳಿದ ಕಡೆಯ ಕಚೇರಿಗಳಲ್ಲಿ ಅತಿ ಶೀಘ್ರವೇ ಸಂಪೂರ್ಣವಾಗಿ ಕನ್ನಡ ಬಳಕೆಗೆ ಬರಬಹುದೆಂಬ ನಂಬಿಕೆ ಇದೆ.

ಅನುಬಂಧ

ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ಕಾರ್ಯಕ್ರಮಗಳು :

ಕಾರ್ಯವ್ಯಾಪ್ತಿ :—

೧) ಸರ್ಕಾರದ ರಾಜಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳು ಕಟ್ಟುನಿಟ್ಟಾಗಿ ಪ್ರಯತ್ನಿಸಿರುವುವೆ ?

೨) ಈ ಪ್ರಯತ್ನಗಳಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದಿರುವುದೇ, ಹಾಗಿದ್ದರೆ ಅವು ಯಾವುವು ?

೩) ಈ ನ್ಯೂನತೆಗಳಿಗೆ ಯಾರು ಆಥವಾ ಏನು ಕಾರಣವಾಗಿರುವುದು ?

೪) ಈ ನ್ಯೂನತೆಗಳನ್ನು ಹೋಗಲಾಡಿಸಲು ಸಲಹೆಗಳೇನು ?

೫) ಸರ್ಕಾರದ ನೀತಿಯನ್ನು ಅತ್ಯಂತ ತ್ವರಿತವಾಗಿ ಮತ್ತು ಅತ್ಯಂತ ತೃಪ್ತಿಕರವಾಗಿ ಕಾರ್ಯ ರೂಪಕ್ಕೆ ತರಲು ಏನಾದರೂ ಸಲಹೆಗಳಿವೆಯೇ ?

ಸಮಿತಿಯು ಮೇಲೆ ಸೂಚಿಸಿರುವ ವಿಷಯಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ, ಅವುಗಳ ಬಗ್ಗೆ ಪರಿಹಾರವನ್ನು ಸೂಚಿಸಬೇಕು. ಹಾಗೂ ಸುಧಾರಣೆಗೆ ಸಲಹೆಗಳನ್ನು ಮಾಡಬೇಕು.

ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಧಾರವಾಡ ಶಹರದ ಕಾರ್ಯಕ್ರಮಗಳ ಬಗ್ಗೆ

೧೬೩. (೪೭೪) ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ :—

೩-೩-೧೯೮೭ರಂದು ನಡೆದ ರಾಜ್ಯ ರಸ್ತೆ ಸಾರಿಗೆ ನಿಗಮದ ಸಭೆಯಲ್ಲಿ ಸೂಚಿಸಿರುವ ಧಾರವಾಡ ಶಹರದ ಯಾವ ಯಾವ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು).—

ಈ ಕೆಳಕಂಡ ಸಲಹೆಗಳ ಬಗ್ಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

೧) ಹುಬ್ಬಳ್ಳಿ ಮತ್ತು ಧಾರವಾಡಗಳ ನಡುವೆ ಹೆಚ್ಚುವರಿ ಬಸ್ಸುಗಳನ್ನು ಓಡಿಸಲಾಗುತ್ತಿದೆ.

೨) ವಿದ್ಯಾನಗರ ಮತ್ತು ಬಸವೇಶ್ವರ ನಗರಗಳ ನಡುವೆ ಹೆಚ್ಚುವರಿ ಬಸ್ಸುಗಳನ್ನು ಓಡಿಸ ಲಾಗುತ್ತಿದೆ.

೩) ಬೆಂಗಳೂರು-ಧಾರವಾಡ ಬದಲಿಗೆ ಬೆಂಗಳೂರು-ಹುಬ್ಬಳ್ಳಿ ನಡುವೆ ಒಂದು ಸುವಿಹಾರಿ ಬಸ್ಸನ್ನು ಪ್ರಾರಂಭಿಸಲಾಗಿದೆ.

೪) ಅನಧಿಕೃತ ವಾಹನಗಳ ಓಡಾಟವನ್ನು ಕನಿಷ್ಟಗೊಳಿಸಲಾಗಿದ್ದು ಅವುಗಳ ಪುನರಾವರ್ತನೆ ಆಗದಂತೆ ನೋಡಿಕೊಳ್ಳಲು ಸಂಬಂಧಪಟ್ಟ ಇಲಾಖೆಯನ್ನು ಕೋರಲಾಗಿದೆ.

೫) ಪ್ರತಿಯೊಂದು ನಿಯಂತ್ರಣ ಕೇಂದ್ರದಲ್ಲಿಯೂ ಸರಕು ಸಾಗಣೆಯನ್ನು ನಿಯಂತ್ರಿಸ ಲಾಗಿದ್ದು ಸೋರಿಕೆಯನ್ನು ಕನಿಷ್ಟಗೊಳಿಸಲಾಗಿದೆ.

೬) ಪ್ರಯಾಣಿಕರೊಡನೆ ಅಸಭ್ಯವಾಗಿ ವರ್ತಿಸುವ ಹಮಾಲರುಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಹುಬ್ಬಳ್ಳಿಯ ಕೆ. ಎಂ. ಸಿ. ಆಸ್ಪತ್ರೆ ಸುಧಾರಣೆ ಬಗ್ಗೆ

೧೬೪(೫೦೩) ಪಿ. ಸಿ. ಸಿದ್ದನ ಗೌಡ (ಕಲಘಟಗಿ).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹುಬ್ಬಳ್ಳಿ ಕೆ. ಎಂ. ಸಿ. ಆಸ್ಪತ್ರೆಯಲ್ಲಿ ಕ್ಯಾನ್ಸರ್ ಘಟಕ ಇದೆಯೇ ? ಹಾಗಿದ್ದಲ್ಲಿ ಅದು ಕಾರ್ಯ ಮಾಡುತ್ತಿದೆಯೇ ?